**ಓ.ಎಸ್. ನಂಃ 410/2023**

**ಪಿ.ಡಬ್ಲ್ಯೂಃ 2**

**ದಿನಾಂಕ 04.12.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಟಿ.ಜಿ. ವಕೀಲರಿಂದಃ</u>**

1. ನ್ಯಾಯಾಲಯದಲ್ಲಿ ಈ ದಿನ ಸಾಕ್ಷಿ ನುಡಿಯಲು ವಾದಿಯು ನನಗೆ ಫೋನ್ ಮುಖಾಂತರ ಹೇಳಿರುತ್ತಾರೆ. ವಾದಿ ನನ್ನ ಪರಿಚಯಸ್ಥರಲ್ಲ. ಪ್ರತಿವಾದಿಯು ವಿಜಯನಗರದ ಬಸ್ ಡಿಪೋಗೆ ಬರುತ್ತಿದ್ದ ಕಾರಣ ನನಗೆ ಪ್ರತಿವಾದಿಯ ಪರಿಚಯವಿರುತ್ತದೆ. ವಿಜಯನಗರದ ಬಸ್ ಡಿಪೋದ ಹೊರಗಡೆ ಇರುವ ಟೀ ಅಂಗಡಿಯಲ್ಲಿ ನಾನು ಯವಾಗಲೂ ಟೀ ಕುಡಿಯಲು ಹೋಗುತ್ತಿದ್ದು, ಸದರಿ ಟೀ ಅಂಗಡಿಯಲ್ಲಿ ಟೀ ಕುಡಿಯಲು ಪ್ರತಿವಾದಿಯು ಸಹ ಬರುತ್ತಿದ್ದರು.

2. ನನ್ನ ಮನೆಯಿಂದ ವಿಜಯನಗರದ ಬಸ್ ಡಿಪೋಗೆ 2 ½ ಕಿ.ಲೋ. ಮೀಟರ್ ನ ಅಂತರವಿದೆ. ನಾನು ಕೇಲವ ಟೀ ಕುಡಿಯಬೇಕು ಎನ್ನುವ ಒಂದೇ ಉದ್ದೇಶದಿಂದ ವಿಜಯನಗರದ ಬಸ್ ಡಿಪೋದ ಹೊರಗಡೆ ಇರುವ ಟೀ ಅಂಗಡಿಗೆ ಹೋಗುತ್ತಿರಲಿಲ್ಲ ಬದಲಾಗಿ ಸಾಮಾನ್ಯವಾಗಿ ನಾನು ಮತ್ತು ನನ್ನ ಗೆಳೆಯರಾದ ಗಿರೀಶ್, ಸಂಜು, ಭರತ್, ಕಾರ್ತಿಕ್ ನಾವೆಲ್ಲಾ ಸದರಿ ಟೀ ಅಂಗಡಿಯಲ್ಲಿಯೇ ಬೇಟಿ ಆಗಿ ಮಾತನಾಡುತ್ತಿದ್ದ ಕಾರಣ ಸದರಿ ಟೀ ಅಂಗಡಿಗೆ ನಾವು ಹೋಗುವುದು ಬರುವುದು ಮಾಡುತ್ತಿದ್ದೇವು. ನಾನು ಹೇಳಿದ ಸದರಿ ಟೀ ಅಂಗಡಿ FOOD TRUCK ರೀತಿಯಲ್ಲಿ ಇದ್ದು, ಒಂದು ಸಣ್ಣ ಟೆಂಪೋದಲ್ಲಿ ಸದರಿ ಟೀ ಅಂಗಡಿ ನಡೆಸುತ್ತಿದ್ದರು.

3. ನನಗೆ ಪ್ರತಿವಾದಿಯ ಮೊಬೈಲ್ ನಂಬರ್ ಗೊತ್ತಿಲ್ಲ. ಪ್ರತಿವಾದಿಯು ಎಂದಿಗೂ ಸಹ ನನಗೆ ಫೋನ್ ಮಾಡಿರುವುದಿಲ್ಲ ಅದೇ ರೀತಿ ನಾನು ಸಹ ಎಂದಿಗೂ ಪ್ರತಿವಾದಿಗೆ ಫೋನ್ ಮಾಡಿರುವುದಿಲ್ಲ. ಪ್ರತಿವಾದಿಯು ಕೆ.ಆರ್.ಪೇಟೆ ತಾಲ್ಲೂಕಿನ ಸೋಮನಾಥಪುರದವರಾಗಿರುತ್ತಾರೆ. ನಾನು ಎಂದಿಗೂ ಸಹ ಪ್ರತಿವಾದಿಯ ಊರಿಗೆ ಹೋಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯು

ಸೋಮನಾಥಪುರದವರಾಗಿರುತ್ತಾರೆ ಎಂದು ಪ್ರತಿವಾದಿಯೇ ನನ್ನಲ್ಲಿ ಹೇಳಿದ ಕಾರಣ ನನಗೆ ಗೊತ್ತಾಗಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

4. ನಿಪಿ.1 ರ ದಾಖಲೆಯನ್ನು ನನ್ನ ಸಮಕ್ಷಮದಲ್ಲಿಯೇ ಬೆರಳಚ್ಚು ಮಾಡಿಸಿರುತ್ತಾರೆ. ನಿಪಿ.1 ರ ದಾಖಲೆಯನ್ನು ತಯಾರಿಸುವಾಗ ಪ್ರತಿವಾದಿಯು ತಮ್ಮ ಗುರುತಿನ ಚೀಟಿಯನ್ನು ಕೊಟ್ಟಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯು ಬಸವನಹಳ್ಳಿ ಗ್ರಾಮದವರು ಎಂದರೆ ಸಾಕ್ಷಿಯು ಪ್ರತಿವಾದಿಯು ಸೋಮನಾಥಪುರದವರಾಗಿರುತ್ತಾರೆ ಎಂದು ಪ್ರತಿವಾದಿಯೇ ನನ್ನಲ್ಲಿ ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ.

5. ತಾನು ಸೋಮನಾಥಪುರದ ನಿವಾಸಿ ಎಂದು ಪ್ರತಿವಾದಿ ಟೀ ಅಂಗಡಿಯಲ್ಲಿ ನನಗೆ ಹೇಳಿರುತ್ತಾರೆ. ನಿಪಿ.1 ರ ಛಾಪಾ ಕಾಗದವನ್ನು ಪ್ರತಿವಾದಿಯೇ ತಂದಿದ್ದು, ಅದನ್ನು ಎಷ್ಟು ಗಂಟೆಗೆ ಪ್ರತಿವಾದಿಯು ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.1 ರ ಛಾಪಾ ಕಾಗದದೊಂದಿಗೆ ಸಂಜೆ 5.00-5.30 ಗಂಟೆಗೆ ಪ್ರತಿವಾದಿಯು ನನ್ನನ್ನು ಭೇಟಿ ಆಗಿರುತ್ತಾರೆ. ಆ ರೀತಿ ಸದರಿ ದಿನದಂದು ಪ್ರತಿವಾದಿಯು ನನ್ನನ್ನು ವಿಜಯನಗರದ ಬಸ್ ಡಿಪೋ ಬಳಿ ಭೇಟಿ ಆಗಿರುತ್ತಾರೆ.

6. ನಿಪಿ.1 ರ ದಾಖಲೆಯನ್ನು ಮಿರ್ಲೆಯಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ. ನಾವು ಕೆ ಆರ್ ನಗರಕ್ಕೆ ಬಂದಿದ್ದಾಗ ಉಪನೊಂದಣಾಧಿಕಾರಿಗಳ ಕಚೇರಿ ತೆರೆದಿರದ ಕಾರಣ ನಾವು ಮಿರ್ಲೆಗೆ ಹೋಗಿರುತ್ತೇವೆ. ವಾದಿ ಮತ್ತು ಪ್ರತಿವಾದಿಯರು ಮಿರ್ಲೆ ಗ್ರಾಮಸ್ಥರಲ್ಲದಿದ್ದರು ಸಹ ಯಾಕೆ ನಿಪಿ.1 ರ ದಾಖಲೆಯನ್ನು ಮಿರ್ಲೆಯಲ್ಲಿ ತಯಾರಿಸಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿಯ ನಿಪಿ.1 ರ ದಾಖಲೆಯನ್ನು ಮಿರ್ಲೆಯಲ್ಲಿ ಮಾಡಿಸುವ ಎಂದು ಹೇಳಿ ನಮ್ಮನ್ನು ಮಿರ್ಲೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ನಾವು ಸಂಜೆ ಅಂದಾಜು 6.30 ಗಂಟೆಗೆ ಕೆ ಆರ್ ನಗರಕ್ಕೆ ತಲುಪಿರುತ್ತೇವೆ.

7. ಮೈಸೂರು ಸಿಟಿ ಬಸ್ ನಿಲ್ದಾಣದಿಂದ ವಿಜಯನಗರದ ಬಸ್ ಡಿಪೋ ಬಳಿ ತಲುಪಲು 20 ನಿಮಿಷಗಳ ಕಾಲಾವಕಾಶ ಸಾಕಾಗುತ್ತದೆ. ನಿಪಿ.1 ರ ಛಾಪಾ ಕಾಗದವನ್ನು 5.35 ಗಂಟೆಗೆ ಖರೀದಿಸಿರುವುದಾಗಿ ನಮೂದಾಗಿದ್ದು, 5.30 ಗಂಟೆಗೆ

ಪ್ರತಿವಾದಿಯು ನಿಮ್ಮನ್ನು ವಿಜಯನಗರದ ಬಸ್ ಡಿಪೋ ಬಳಿ ಬೇಟಿ ಆಗಲು ಹೇಗೆ ಸಾಧ್ಯ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು 5.30 ಗಂಟೆ ಹೊತ್ತಿಗೆ ಪ್ರತಿವಾದಿಯು ನನ್ನನ್ನು ಬೇಟಿ ಆಗಿರುತ್ತಾರೆ ಎಂದು ನುಡಿದಿರುತ್ತಾರೆ. ಮೈಸೂರಿನಿಂದ ಕೆ ಆರ್ ನಗರಕ್ಕೆ ಬರಲು 1.00 ಗಂಟೆ ಕಾಲಾವಕಾಶ ಬೇಕಾಗಿದ್ದು, ಸದರಿ ದಿನದಂದು ನಾವು ಸಂಜೆ 6.30 ಗಂಟೆಗೆ ಕೆ ಆರ್ ನಗರಕ್ಕೆ ಬಂದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನಿಪಿ.1 ರ ಪ್ರೋನೋಟ್ ಬರೆದ ಜಾಗದಲ್ಲಿ ಪ್ರತಿವಾದಿ ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಿಪಿ.1 ರ ಪ್ರನೋಟ್ ನಲ್ಲಿ ಪ್ರತಿವಾದಿಯು ತಮ್ಮ ಒಂದು ಸಹಿಯನ್ನು ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ.1 ರ ಪ್ರೋನೋಟ್ ಬರೆದ ಜಾಗದಲ್ಲಿ ನನ್ನ ಸಹಿ ಇಲ್ಲ ಎಂದರೆ ಸಾಕ್ಷಿಯು ನಿಪಿ.1 ರ ದಾಖಲೆಯ ಕೆಳಗಡೆ ನಾನು ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ವಾದಿಯ ಅಳಿಯನಾದ ದರ್ಶನ್ ರವರೊಂದಿಗೆ ಮಾಡಿದ್ದ ವ್ಯವಹಾರದ ಸಂಬಂಧ ನಿಪಿ.1 ರ ಖಾಲಿ ಛಾಪಾ ಕಾಗದಕ್ಕೆ ಪ್ರತಿವಾದಿಯು ಸಹಿಯನ್ನು ಮಾಡಿ ದರ್ಶನ್ ರವರಿಗೆ ಕೊಟ್ಟಿದ್ದು, ವಾದಿ ಮತ್ತು ದರ್ಶನ್ ರವರ ಮಧ್ಯೆ ವೈಷಮ್ಯ ಇರುವ ಕಾರಣದಿಂದ ವಾದಿಯು ನಿಪಿ.1 ರ ಖಾಲಿ ಛಾಪಾ ಕಾಗದವನ್ನು ದುರುಪಯೋಗಪಡಿಸಿಕೊಂಡು ನಿಪಿ.1 ರ ಸುಳ್ಳು ದಾಖಲೆಯನ್ನು ಸೃಷ್ಟಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನನಗೆ ಪತಿವಾದಿಯ ಪರಿಚಯ ಇರದಿದ್ದರು ಸಹ ಕೇವಲ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**

**ನ್ಯಾಯಾಧೀಶರು, ಕೆ.ಆರ್.ನಗರ.**